ನೇತಾಡುವ ಜೋಳಿಗೆಯಿಂದ ಚೀಟಿಯನ್ನು ತೆಗೆದು, ನನ್ನ ಕೈಗೆ ಹಾಕಿ ಬಾಣದಂತೆ ಹೊರಟು ಹೋದ.

ಮೂರನೆಯ ರಾತ್ರಿ ವೇಳೆಯಲ್ಲಿ ಯೂನಿಯನ್ ಕಚೇರಿಯನ್ನು ಪೊಲೀಸರು ಶೋಧಿಸಿದರು ಎಂದು ತಿಳಿದುಬಂತು. ಜೊತೆಯಲ್ಲಿ ಇನ್ನೂ ಸಾಕಷ್ಟು ಕೂಲಿಕಾರರಿದ್ದರು. ಯೂನಿಯನ್ ಕಚೇರಿ ನಗರದಿಂದ ಹೊರ ಭಾಗದಲ್ಲಿ ಇನ್ನೊಂದು ದಿಕ್ಕಿಗಿತ್ತು. ಅಲ್ಲಿ ಅಕ್ಕಪಕ್ಕ ಜನರು ವಾಸಿಸುತ್ತಿರಲಿಲ್ಲ. ತದನಂತರ ಕಾಡಿನ ಪ್ರದೇಶ ಪ್ರಾರಂಭವಾಗುತ್ತಿತ್ತು. ಕಾಡು ಸುಮಾರು ಹತ್ತು ಮೈಲಿಯವರೆಗಿನ ಪ್ರದೇಶದಲ್ಲಿ ವ್ಯಾಪಿಸಿತ್ತು.

ಕೂಲಿಕಾರರು ಪೊಲೀಸರನ್ನು ತಡೆದರು. ಆದರೆ, ಇನ್‌ಸ್ಪೆಕ್ಟರ್ ಕರೀಮ್ ಬಖ್ಸ್ ಮೂರ‍್ನಾಲ್ಕು ಕಾನ್‌ಸ್ಟೇಬಲ್‌ರೊಂದಿಗೆ ಒಳ ನುಗ್ಗಿದ. ಅವನು ಫೈಲ್‌ಗಳು, ರಿಜಿಸ್ಟರ್‌ಗಳು, ಕಾಗದ-ಪತ್ರಗಳನ್ನು ಒಟ್ಟು ಮಾಡಿಕೊಳ್ಳಲು ಆರಂಭಿಸಿದ. ಆಗ ಟೇಪಚೂ ಪೊಲೀಸರನ್ನು ತಳ್ಳುತ್ತಾ ಒಳಗೆ ಹೋಗಿ ಕಿರುಚಿದ, 'ಇನ್‌ಸ್ಪೆಕ್ಟರ್ ಸಾಹೇಬ್ರೆ, ಕಾಗದ-ಪತ್ರಗಳನ್ನು ಮುಟ್ಟಬೇಡಿ, ಇವತ್ತು ಯೂನಿಯನ್‌ನ್ನು ಕಾಯುವುದು ನನ್ನ ಕೆಲಸ. ನಾನು ಹೇಳುತ್ತಿದ್ದೇನೆ. ನಾನು ಹಿಂದು-ಮುಂದು ನೋಡಲ್ಲ. ಆದರೆ, ನೀವು ಸರಿಯಾಗಿ ಯೋಚನೆ ಮಾಡಿ.'

ಇನ್‌ಸ್ಪೆಕ್ಟರ್‌ಗೆ ಆಶ್ಚರ್ಯವಾಯಿತು. ನಂತರ ಅವನ ಕಣ್ಣುಗಳು ಸಿಟ್ಟಿನ ಭರದಲ್ಲಿ ಕೆಂಪಗಾದವು. ಮೂಗಿನ ಹೊಳ್ಳೆಗಳು ಹೋರಿಯಂತೆ ಕಂಪಿಸಿದವು, 'ಯಾವನೋ ನೀನು ಸೂ... ಮಗನೇ... ತೂಫಾನಿ ಸಿಂಗ್, ಬೇವರ್ಸಿ ನನ್ಮಗನಿಗೆ ದೊಣ್ಣೆಯಿಂದ ಹತ್ತು ಸಾರಿ ಹೊಡಿ!.'

ಪೊಲೀಸ್ ತೂಫಾನಿ ಸಿಂಗ್ ಮುಂದೆ ಬಂದಾಗ ಟೇಪಚೂ ಒಂದು ಕಾಲಿನಲ್ಲಿ ಅವನನ್ನು ಬಾಗಿಲಿನಿಂದ ಅರ್ಧ ಹೊರಗೆ, ಅರ್ಧ ಒಳಗೆ ಸತ್ತ ಹಲ್ಲಿಯಂತೆ ನೆಲಕ್ಕೆ ಕೆಡವಿ ಮಲಗಿಸಿದ. ಇನ್‌ಸ್ಪೆಕ್ಟರ್ ಕರೀಮ್ ಬಖ್ಸ್ ಅತ್ತ-ಇತ್ತ ನೋಡಿದ. ಪೊಲೀಸರು ಸಿದ್ಧರಿದ್ದರು. ಆದರೆ, ಅವರ ಸಂಖ್ಯೆ ಕಡಿಮೆಯಿತ್ತು. ಅವರು ಸಂಜ್ಞೆ ಕೊಡುವುದಕ್ಕೂ ಮೊದಲೇ ಅವರ ಕೊರಳು ಟೇಪಚೂನ ಬಾಹುಗಳಲ್ಲಿ ಸಿಲುಕಿತ್ತು.

ಕೂಲಿಕಾರರ ಗುಂಪು ಒಳಗೆ ಬಂತು, ಹಿಂದು-ಮುಂದು ನೋಡದೆ ಲಾಠಿಗಳ ವರಸೆ ಪ್ರಾರಂಭವಾಯಿತು. ಅನೇಕ ಪೊಲೀಸರ ತಲೆಗೆ ಹೊಡೆತ ಬಿತ್ತು. ಅವರು ರೋದಿಸುತ್ತಿದ್ದರು, ಅಂಗಲಾಚುತ್ತಿದ್ದರು. ಟೇಪಚೂ ಇನ್‌ಸ್ಪೆಕ್ಟರನನ್ನು ಬೆತ್ತಲೆಗೊಳಿಸಿದ್ದ.

ಪೆಟ್ಟು ತಿಂದ ಪೊಲೀಸರ ಮೆರವಣಿಗೆ ಸಾಗಿತು. ಮುಂದೆ ಇನ್‌ಸ್ಪೆಕ್ಟರ್ ಹಿಂದೆ ತೂಫಾನಿ ಸಿಂಗ್, ಎಲ್ಲರೂ ಪಂಕ್ತಿಯಲ್ಲಿ ಐವರು ಸೈನಿಕರೊಂದಿಗೆ ಹೋಗುತ್ತಿದ್ದರು. ಅವರ ಹಿಂದೆ ಕೂಲಿಕಾರರ ಗುಂಪು ಕೇಕೆಹಾಕಿ ನಗುತ್ತಿತ್ತು. ಪೊಲೀಸರ ಸ್ಥಿತಿ ದಯನೀಯವಾಗಿತ್ತು. ಯೂನಿಯನ್ ಕಚೇರಿಯಿಂದ ಹೊರಟ ಮೆರವಣಿಗೆ ಕಾರ್ಖಾನೆಯ ಗೇಟಿನವರೆಗೆ ಹೊರಟಿತು. ನಂತರ ಪೊಲೀಸರನ್ನು ಬಿಟ್ಟು ಗರ್ವದಿಂದ ಬೀಗುತ್ತಿದ್ದ ಕೂಲಿಕಾರರು ಮರಳಿ ಹೋದರು. ಟೇಪಚೂನ ಎದೆ ಗರ್ವದಿಂದ ಸೆಟೆದುಕೊಂಡಿತ್ತು, ಅವನು ಸಾಲ್ಟೋ-ದಾದರ್ ಹಾಡನ್ನು ಹಾಡುತ್ತಿದ್ದ.

ಮರುದಿನ ಬೆಳಗ್ಗೆ ಟೇಪಚೂ ತನ್ನ ಬಿಡಾರದಿಂದ ಹೊರಬಂದು ಶೌಚಕ್ಕೆ ಹೋಗುತ್ತಿದ್ದ; ಆಗಲೇ ಪೊಲೀಸರು ಬಂದು ಅವನನ್ನು ಬಂಧಿಸಿದರು. ಇನ್ನೂ ಅನೇಕರನ್ನು ಬಂದಿಸಲಾಗಿತ್ತು. ಎಲ್ಲೆಡೆಯಲ್ಲೂ ಬಂಧನದ ಕೆಲಸ ಮುಂದುವರೆದಿತ್ತು.

ಟೇಪಚೂನನ್ನು ಬಂದಿಸಿದಾಗ ಅವನು ತಾನು ಹಿಡಿದಿದ್ದ ಲೋಟವನ್ನು ರಭಸದಿಂದ ತೂಫಾನಿ ಸಿಂಗ್‌ಗೆ ಹೊಡೆದ. ಲೋಟ ಹಣೆಯ ಮಧ್ಯಭಾಗಕ್ಕೆ ಬಡಿದು, ರಕ್ತ ಚಿಮ್ಮಿತು. ಟೇಪಚೂ ಓಡಿ ಹೋಗಲು ಪ್ರಯತ್ನಿಸಿದಾಗ, ಪೊಲೀಸರು ಅವನನ್ನು ಸುತ್ತುವರೆದು ನಿಂತರು. ಸಿಟ್ಟಿನ ಆವೇಶದಲ್ಲಿ ಹುಚ್ಚನಾಗಿದ್ದ ತೂಫಾನಿ ಸಿಂಗ್ ಒಂದೇ ಸಮನೆ ಅವನಿಗೆ ದೊಣ್ಣೆಯಿಂದ ಹೊಡೆದ, ಅವನ ಬಾಯಿಯಿಂದ ನಿರಂತರವಾಗಿ ನಿಂದನೆಗಳು ಹೊರಬರುತ್ತಿದ್ದವು.

ಪೊಲೀಸರು ಅವನಿಗೆ ಚಪ್ಪಲಿಯಿಂದ ಹೊಡೆದರು. ಇನ್‌ಸ್ಪೆಕ್ಟರ್ ಕರೀಮ್ ಬಖ್ಸ್ ಸಹ ಜೀಪಿನಿಂದ ಇಳಿದು ಬಂದ. ಯೂನಿಯನ್ ಕಚೇರಿಯಲ್ಲಿ ಅವನಿಗೆ ಮಾಡಿದ ಅಪಮಾನವನ್ನು ಅವನು ಮರೆತಿರಲಿಲ್ಲ.

ಇನ್‌ಸ್ಪೆಕ್ಟರ್ ಕರೀಮ್ ಬಖ್ಸ್, ತೂಫಾನಿ ಸಿಂಗ್‌ಗೆ, 'ಟೇಪಚೂನನ್ನು ಬೆತ್ತಲೆಗೊಳಿಸಿ, ಅವನ ಅಂಡಿಗೆ ಒಂದು ಕೋಲನ್ನು ತುರುಕು' ಎಂದ. ತೂಫಾನಿ ಸಿಂಗ್ ಈ ಕೆಲಸವನ್ನು ಗಜಾಧರ ಶರ್ಮಾಗೆ ವಹಿಸಿದ.